ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ನಾಣಯ್ಯನವರು ಕಿಡ್ಸ್‌ಕೆಂಪ್ ಬಗ್ಗೆ ಬಹಳ ಖಚಿತವಾದ ಉತ್ತರವನ್ನು ಕೊಟ್ಟಿದ್ದರು, ಅದನ್ನು ಕೂಡಲೇ ನಾವು ನಿಲ್ಲಿಸುತ್ತೇವೆ ಎಂದು, ಬಾಲಕಾರ್ಮಿಕರ ಶೋಷಣೆ ಬಗ್ಗೆ, ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ದಯವಿಟ್ಟು ಉತ್ತರ ಕೊಡಿ.

ಉಪಾಧ್ಯಕ್ಷರು : ತಾವು ಕೇಳಿದ ಪ್ರಶ್ನೆ ಬೇರೆ, ಪ್ರತ್ಯೇಕ ಪ್ರಶ್ನೆ ಕೇಳಿ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಪ್ರತ್ಯೇಕ ಪ್ರಶ್ನೆ ಅಲ್ಲ, ಬಾಲ ಕಾರ್ಮಿಕರ ಬಗ್ಗೆ ಮೇಲ್ಮನೆಯಲ್ಲಿ ಉತ್ತರ ಕೊಡುತ್ತಿರುವಾಗ, ಮಾನ್ಯ ನಾಣಯ್ಯನವರು ಹೇಳಿದ್ದರು, ಪ್ರತಿ ದಿವಸ ನಾನು ಕಾರಿನಲ್ಲಿ ಹೋಗುವಾಗ ನೋಡುತ್ತೇನೆ ಇದನ್ನು, ನಾನು ನಿಲ್ಲಿಸುತ್ತೇನೆ ಎಂದು ಹೇಳಿದ್ದರು. ಅವರು ಸಭೆಯಲ್ಲಿದ್ದಾರೆ ಉತ್ತರ ಕೊಡಲಿ. ಹಾಗಾದರೆ ನಿಲ್ಲಿಸಿಲ್ಲ ಇದುವರೆಗ ಸರ್ಕಾರ ಎಂದು.

ರಾಜ್ಯದಲ್ಲಿ ಲಾಟರಿ ಟಿಕೇಟುಗಳ ಮಾರಾಟದಿಂದ ಬಂದ ವರಮಾನ

190 - ಶ್ರೀ ಚಂದ್ರಕಾಂತ್ ಬೆಲ್ಲದ್ (ಧಾರವಾಡ) ; ಮಾನ್ಯ ಉಪಮುಖ್ಯಮಂತ್ರಿಯವರು ಈ ಕೆಳಕ್ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಳೆದ 2 ವರ್ಷಗಳಿಂದ ರಾಜ್ಯದಲ್ಲಿ ಮಾರಾಟಗೊಂಡ ವಿವಿಧ ಲಾಟರಿ ಟಿಕೇಟುಗಳಿಂದ ಸರ್ಕಾರಕ್ಕೆ ಬಂದ ಆದಾಯವೆಷ್ಟು?*

ಆ) *ಲಾಟರಿ ಬಹುಮಾನ ಪಡೆದವರಿಗೆ ಎಷ್ಟು ಹಣವನ್ನು ನೀಡಲಾಗಿದೆ; ಇನ್ನು ಎಷ್ಟು ಹಣ ಸರ್ಕಾರಕ್ಕೆ ಉಳಿದಿದೆ?*

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಯವರು) :

ಅ) *1994-96* *1995-96*
(ಕೋಟಿ ರೂ.) *(ಕೋಟಿ ರೂ.)*
26.7 **28.39**

ಆ) ಬಹುಮಾನ ವಿಜೇತರಿಗೆ ನೀಡಿದ ಹಣ	**11.73**	**13.45**
ಸರ್ಕಾರಕ್ಕೆ ಉಳಿದ ಹಣ	**2.17**	**2.29**

ಶ್ರೀ ಚಂದ್ರಕಾಂತ್ ಬೆಲ್ಲದ್ : ಮಾನ್ಯ ಅಧ್ಯಕ್ಷರೆ, ಕಳೆದ ಎರಡು ವರ್ಷಗಳಲ್ಲಿ ಲಾಟರಿ ಮಾರಾಟದಲ್ಲಿ 1994-95ರಲ್ಲಿ 26.7 ಕೋಟಿ ರೂ.ಗಳು ಬಂದಿದೆ. 1995-96ರಲ್ಲಿ 28.39 ಕೋಟಿ ರೂ.ಗಳು ಬಂದಿದೆ. ಇದರಲ್ಲಿ ಲಾಟರಿ ಬಹುಮಾನ ಪಡೆದವರಿಗೆ ಹಣ ಕೊಟ್ಟು ಉಳಿದ ಹಣ ಕೆಲವು ಮಂದಿ ಲಾಟರಿ ಬಹುಮಾನವನ್ನು ಇನ್ನೂ ಪಡೆದಿಲ್ಲ, ಈ ರೀತಿ ಪಡೆಯದೇ ಇರುವವರಿಗೆ ಏನಾದರೂ

ಒಂದು ಅವಧಿ ಇಂತಿಷ್ಟೇ ದಿವಸದಲ್ಲಿ ತೆಗೆದುಕೊಳ್ಳಬೇಕು ಎಂದು ಒಂದು ನಿಗಧಿತ ಅವಧಿ ಏನಾದರೂ ಇದೆಯೇ? ಹೇಗೆ ಎನ್ನುವುದು ಒಂದು ಪ್ರಶ್ನೆ. ಆಮೇಲೆ ಅವಧಿ ಮೀರಿದ ನಂತರ ಬಂದ ಅನೇಕ ಬಹುಮಾನ ಪಡೆದವರು ಈಗ ಬಹುಮಾನ ಪಡೆಯತಕ್ಕಂಥವರ ಯಾದಿ ಏನಾದರೂ ತಮ್ಮಲ್ಲಿ ಇದೆಯೇ ಹೇಗೆ? ಮೂರನೆಯದು, ಈ ಲಾಟರಿ ಇಲಾಖೆಯಲ್ಲಿ ತಮಗೆ ಬರುತ್ತಾ ಇರುವ ಆದಾಯ ಕೇವಲ 10-12ಕೋಟಿ ರೂ.ಗಳು ಮಾತ್ರ ಉಳಿತಾಯ ಆಗುತ್ತಾ ಇದೆ. ಈಗ ನಿಮ್ಮಸಿಬ್ಬಂದಿ ಖರ್ಚು ಎಷ್ಟಿದೆ? ಇದರಿಂದ ಸರ್ಕಾರಕ್ಕೆ ಏನಾದರೂ ಲಾಭ ಇದೆಯೇ ಅಥವಾ ಜನತೆಗೆ ಏನಾದರೂ ಲಾಭ ಇದೆಯೇ? ಈ ಲಾಟರಿಯನ್ನು ಮುಂದುವರೆಸಿಕೊಂಡು ಹೋಗಬೇಕಾದಂಥ ಅಗತ್ಯ ಈ ಸರ್ಕಾರಕ್ಕೆ ಇದೆಯೇ ಹೇಗೆ ಎಂಬುದಕ್ಕೆ ತಾವು ಉತ್ತರವನ್ನು ಕೊಡಬೇಕು ಎಂದು ಕೇಳಿಕೊಳ್ಳುತ್ತಾ ಇದ್ದೇನೆ.

ಶ್ರೀ ಸಿದ್ದರಾಮಯ್ಯ : ಸನ್ಮಾನ್ಯ ಉಪಾಧ್ಯಕ್ಷರೆ, ಲಾಟರಿ ನಡೆಸುವುದರಿಂದ ಬಹಳ ಲಾಭ ಬರುತ್ತದೆ ಎಂದು ಈ ಸರ್ಕಾರ ಏನು ನಡೆಸುತ್ತಾ ಇಲ್ಲ. ಇದರಿಂದ ಒಂದು ವರ್ಷದಲ್ಲಿ 5,6 ಕೋಟಿ ರೂಪಾಯಿಗಳು ಬರುತ್ತಾ ಇದೆ. ಆದರೆ ಬಹಳ ವರ್ಷಗಳಿಂದ ಇದನ್ನು ನಡೆಸಿಕೊಂಡು ಬಂದಿದ್ದಾರೆ. ಕರ್ನಾಟಕ ರಾಜ್ಯ ಒಂದೇ ಲಾಟರಿ ನಿಲ್ಲಿಸುವುದಕ್ಕೆ ಸಾಧ್ಯ ಆಗುವುದಿಲ್ಲ. ಮತ್ತೆ ನಾವು ನಿಲ್ಲಿಸಿದರೂ, ಬೇರೆ ರಾಜ್ಯದ ಲಾಟರಿಗಳನ್ನು ನಮ್ಮ ರಾಜ್ಯದಲ್ಲಿ ಬಂದ್ ಮಾಡುವುದಕ್ಕೆ ಸಾಧ್ಯ ಆಗುವುದಿಲ್ಲ. ರಾಜ್ಯಾಂಗ ಬದ್ಧವಾಗಿದೆ, ಅದಕ್ಕೆ ನಾನು ಒಂದು ಪತ್ರವನ್ನೂ ಕೂಡ ಹೀಗೆ ಕೇಂದ್ರ ಸರ್ಕಾರಕ್ಕೆ ಬರೆದಿದ್ದೆ ಇದರಿಂದ ರಾಜ್ಯಸರ್ಕಾರಕ್ಕೆ ಏನು ಬಹಳ ಲಾಭ ಇಲ್ಲ. ಇದನ್ನು ನಿಲ್ಲಿಸುವುದಾದರೆ ಒಂದು ತಿದ್ದುಪಡಿ ತರಬೇಕು, ಇದು ಇಡೀ ದೇಶದ ಎಲ್ಲಾ ರಾಜ್ಯಗಳಿಗೂ ಕೂಡ ಅನ್ವಯ ಆಗುವ ರೀತಿಯಲ್ಲಿ ತಿದ್ದುಪಡಿ ತಂದು ಮಾಡಿ ಎಂದು ನಾನು ಒಂದು ಪತ್ರ ಬರೆದಿದ್ದೆ. ಆದರೆ ಕರ್ನಾಟಕ ರಾಜ್ಯ ಒಂದೇ ಈ ಲಾಟರಿಯನ್ನು ನಿಲ್ಲಿಸಿದರೆ, ಬೇರೆ ರಾಜ್ಯ ಸರ್ಕಾರದ ಲಾಟರಿ ಟಿಕೇಟುಗಳನ್ನು ಇಲ್ಲಿಗೆ ತಂದು ಮಾರಾಟ ಮಾಡುವುದಕ್ಕೆ ಶುರು ಮಾಡುತ್ತಾರೆ ಮತ್ತು ನಮಗೆ ಮಾರಬೇಡಿ ಎಂದು ಹೇಳಲಿಕ್ಕೆ , ಅಥವಾ ಅನುಮತಿ ಕೊಡುವುದಕ್ಕೆ ನಮಗೆ ಸಾಧ್ಯ ಇಲ್ಲ. ಇದಕ್ಕೆ ಸುಪ್ರೀಂ ಕೋರ್ಟ್‌ನ ತೀರ್ಮಾನ ಇದೆ. ಅದಕ್ಕೆ ನಾವು ಅನುಮತಿ ಕೊಡಲೇ ಬೇಕಾಗುತ್ತದೆ, ಮಾರಾಟ ಮಾಡಬೇಕಾಗುತ್ತದೆ. ಮತ್ತೆ ಇದರಲ್ಲಿ ಯಾರಿಗೆ ಲಾಟರಿ ಬಂದಿರುತ್ತದೆ, ಅಂಥವರಿಗೆ 90 ದಿನಗಳ ಕಾಲಾವಕಾಶ ಇರುತ್ತದೆ. ಅವರವರ ಟೈಮಿಗೆ 90 ದಿನಗಳಲ್ಲಿ ಅವರು ತೆಗೆದುಕೊಳ್ಳದೆ ಹೋದರೆ ಡೈರೆಕ್ಟರುಗಳಿಗೆ ಅಥವಾ ನಿರ್ದೇಶಕರಿಗೆ 120 ದಿನಗಳವರೆಗೂ ಕೂಡ ಕೊಡುವುದಕ್ಕೆ ಅವಕಾಶ ಇರುತ್ತದೆ, ಈ ಅವಧಿ ಮೀರಿದ ಮೇಲೆ ಬಂದರೆ ಕೊಡುವುದಿಲ್ಲ. ಈ ಎರಡು ಅವಧಿಗಳು ಏನು ಇದೆ, 90 ದಿನ ಒಂದು 120 ದಿನ ಒಂದು, ಅವರು ಸರಿಯಾದಂತಹ ವಿವರಣೆ ಕೊಟ್ಟು ಮಾಡಿಕೊಳ್ಳಬಹುದು. ಆದ್ದರಿಂದ ಸಿಬ್ಬಂದಿ ವೆಚ್ಚಕ್ಕೆ ಆಗತಕ್ಕಂತಹ ಖರ್ಚು 94-95ರಲ್ಲಿ 8ಲಕ್ಷ, 95-96ರಲ್ಲಿ 8 ಲಕ್ಷ 96-97ರಲ್ಲಿ 7-8 ಲಕ್ಷ ಆಗುತ್ತದೆ. ಇದರಲ್ಲಿ ಒಟ್ಟು ಲಾಟರಿಯಲ್ಲಿ ಬರತಕ್ಕಂತಹ ಆದಾಯದಲ್ಲಿ ಎಂಎಸ್ ಐಎಲ್ ವೋಲ್ ಸೋಲ್ ಪಜೆನ್ಸಿ ಅವರಿಗೆ 37 ಪರ್ಸೆಂಟ್,ಬಂದ ಒಂದು ರೂಪಾಯಿಯಲ್ಲಿ, 40 ಪರ್ಸೆಂಟ್ ಬಹುಮಾನ ಬಂದವರಿಗೆ, ಶೇ [illegible], ಮಾರಾಟ ಮಾಡಿದವರಿಗೆ, ಇನ್ನು ಉಳಿದ 20 ಪರ್ಸೆಂಟ್ ಸಿಬ್ಬಂದಿ ವೆಚ್ಚ, ಖರ್ಚು ಎಲ್ಲಾ ಆಗುತ್ತದೆ.

ಇದೆಲ್ಲಾ ಆಗಿ ನಾನು ಹೇಳತಕ್ಕಂತದ್ದು ಉಳಿದಿರತಕ್ಕಂತದ್ದು ಲಾಭ ಕ್ಲೈಂ ಮಾಡದೆ ಉಳಿದುಕೊಂಡಿರ ತಕ್ಕಂತಹದ್ದು, ಈ ಎರಡೂ ಸೇರಿ 5 ಕೋಟಿ ಚಿಲ್ಲರೆ ಒಂದು 6 ಕೋಟಿ ಇಷ್ಟು ಬಂದಿದೆ.

ಶ್ರೀ ಚಂದ್ರಕಾಂತ್ ಬೆಲ್ಲದ್ : ಈಗ 90 ದಿನ ಮತ್ತು 120 ದಿನ ತಾವು ಏನು ಅವಧಿ ಹೇಳಿದಿರಿ, ಅದರ ನಂತರ ಕೆಲವು ಜನ ಲಾಟರಿ ಬಹುಮಾನವನ್ನು ಪಡೆಯಲಿಕ್ಕೆ ಬಂದಂಥವರು ಎಷ್ಟು ಜನ ನಿಮ್ಮಲ್ಲಿ ಈಗಾಗಲೇ ಕೇಳಿದ್ದಾರೆ? ಎಷ್ಟು ಉಳಿದಿದೆ ಎನ್ನುವ ಪ್ರಶ್ನೆಗೆ ಉತ್ತರ ಬರಲಿಲ್ಲ. ಇದರಿಂದ ಸರ್ಕಾರಕ್ಕೂ ಲಾಭ ಇಲ್ಲ, ಮತ್ತು ಜನತೆಗೂ ಬಹಳ ದೊಡ್ಡ ಹಾನಿ ಇದೆ. ಈ ಟಿಕೇಟ್ ವ್ಯವಹಾರದಿಂದ ಸಾಮಾನ್ಯ ಜನತೆಗೆ ಬಹಳ ದೊಡ್ಡ ಹಾನಿ ಆಗುತ್ತಾ ಇದೆ. ಇದನ್ನು ಏಕೆ ತೀವ್ರವಾಗಿ, ಸಂಪೂರ್ಣವಾಗಿ ಬಂದ ಮಾಡಬಾರದು? ಬೇರೆ ರಾಜ್ಯದಿಂದ ಬರುವುದನ್ನು ಸಹಿತ ಇಲ್ಲಿ ಏಕೆ ಅವಕಾಶ ಕೊಡಬೇಕು? ಇದನ್ನು ತೀವ್ರವಾಗಿ ಸರ್ಕಾರ ಏಕೆ ಕ್ರಮ ತೆಗೆದುಕೊಳ್ಳಬಾರದು? ಇದರಿಂದ ಸಮಾಜಕ್ಕೆ ಹಾನಿ ಇದೆ. ಜನತೆಗೆ ಅನ್ಯಾಯ ಆಗುತ್ತಿದೆ.

ಅಧ್ಯಕ್ಷರು : ಬೇರೆ ರಾಜ್ಯದವರಿಗೆ ನಾವು ಬಂದ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಉತ್ತರ ಹೇಳಿದ್ದಾರಲ್ಲಾ.

ಶ್ರೀ ಸಿದ್ದರಾಮಯ್ಯ : ಆರ್ಥಿಕವಾಗಿ ಇದರಿಂದ ಅನುಕೂಲ ಇಲ್ಲ, ಸಾಮಾನ್ಯ ಜನರು ಲಾಟರಿ ಟಿಕೆಟ್ ತೆಗೆದುಕೊಂಡು ಬಹಳ ಜನರು ಇದರಲ್ಲಿ ನೋವು ಅನುಭವಿಸತಕ್ಕಂಥವರು ಇದ್ದಾರೆ. ಹಿಂದೆ ಸಿಂಗಲ್ ಡಿಜಿಟ್ ಲಾಟರಿ ಅಂದರೆ ಒಂದಂಕಿ ಲಾಟರಿ ತೆಗೆದುಕೊಂಡು ಬಹಳ ಜನ ಆತ್ಮಹತ್ಯೆ ಮಾಡಿಕೊಂಡಿರುವುದು ಇದೆ. ಈಗ ಅದನ್ನು ನಿಲ್ಲಿಸಿದ್ದೇವೆ. ಸಂಪೂರ್ಣವಾಗಿ ಒಂದಂಕಿ ಲಾಟರಿಯನ್ನು ಕರ್ನಾಟಕದಲ್ಲಿ ಮಾರಬಾರದೆಂದು, ಅಂತಿಮವಾಗಿ ನಿಲ್ಲಿಸತಕ್ಕಂತ ಕೆಲಸ ನಾವು ಮಾಡಿದ್ದೇವೆ. ನಾವು ಸುಪ್ರೀಂಕೋರ್ಟ್‌ನ ತೀರ್ಮಾನ ಇದೆ. ಕಾನೂನು ರೀತಿಯಿಂದ ಬೇರೆ ರಾಜ್ಯದವರಿಗೆ ನಾವು ಮಾರುವುದಕ್ಕೆ ಅನುಮತಿ ಕೊಡಬೇಕು. ಒಂದಂಕಿ ಲಾಟರಿಯನ್ನು ನಾವು ತಡೆಗಟ್ಟಬಹುದು, ಆದರೆ ಸಾಮಾನ್ಯ ಲಾಟರಿ ಇದೆಯಲ್ಲಾ ಅದನ್ನು ತಡೆಗಟ್ಟಲಿಕ್ಕೆ ರಾಜ್ಯಸರ್ಕಾರಕ್ಕೆ ಅಧಿಕಾರ ಇಲ್ಲ. ಅದಕ್ಕಾಗಿ ನಾನು ಕೇಂದ್ರಸರ್ಕಾರಕ್ಕೆ ಕಾಗದ ಬರೆದಿದ್ದೇನೆ. ನಿಮ್ಮ ಅಭಿಪ್ರಾಯ ವ್ಯಕ್ತ ಮಾಡಿ ಎಂದು. ಮತ್ತು ಇದರಿಂದ ರಾಜ್ಯಕ್ಕೆ ಆರ್ಥಿಕವಾಗಿ ಏನೂ ಲಾಭ ಇಲ್ಲ. ಇದರಿಂದ ಸಾಮಾನ್ಯ ಜನರಿಗೆ ಕಿರುಕುಳ ಆಗುತ್ತಿದೆ. ತೊಂದರೆ ಆಗುತ್ತಿದೆ. ಆದುದರಿಂದ ಇಡೀದೇಶದಲ್ಲಿ ಲಾಟರಿ ನಿಲ್ಲಿಸುವಂತಹ ತೀರ್ಮಾನ ಏಕೆ ಮಾಡಬಾರದು ಎಂದು ಹೇಳಿ, ಕೇಂದ್ರ ಸರ್ಕಾರದ ಆರ್ಥಿಕ ಮಂತ್ರಿಯವರಿಗೆ ಒತ್ತಾಯ ಮಾಡಿ ಎಂದು ಪತ್ರವನ್ನೂ ಕೂಡ ಬರೆದಿದ್ದೇನೆ ಮಾನ್ಯ ಉಪಾಧ್ಯಕ್ಷರೇ.

ಶ್ರೀ ಯು.ಆರ್. ಸಭಾಪತಿ : ಬಂಪರ್ ಬಹುಮಾನ ಬಂದಂತಹ ಯಾವ ವ್ಯಕ್ತಿ ಇದ್ದಾರೆ, ಅವರಿಗೆ ಬಹುಮಾನ ಕೊಡುವಲ್ಲಿ ವಿಳಂಬವಾಗಿದೆ ಏಕೆ? ನವೆಂಬರ್‌ನಿಂದ ಡಿಸೆಂಬರ್‌ವರೆಗೆ 10 ಲಕ್ಷ ರೂ. ಬಂದರೆ ಯಾವುದು ಬಂದಿತ್ತು ಅದನ್ನು ವಿತರಿಸುವಲ್ಲಿ ವಿಳಂಬ ಮಾಡುತ್ತಿದ್ದೀರಿ ಏಕೆ? ಈಗ ಮಾರ್ಚ್ ತಿಂಗಳು.

ಶ್ರೀ ಸಿದ್ದರಾಮಯ್ಯ : ಅದು ಯಾವುದಾದರೂ ಇದ್ದರೆ ಹೇಳಿ, ಅದನ್ನು ಕೊಡುತ್ತೇವೆ ಯಾವುದನ್ನು ಉಳಿಸುವುದಿಲ್ಲ. ಅದೇ ನಾನು ಹೇಳಿದೆನಲ್ಲಾ ಕ್ಲೈಂ ಮಾಡುವುದಕ್ಕೆ 90 ದಿನ ಇದೆ ಎಂದು, ನಿಶ್ಚಿತವಾಗಿ ಯಾವುದು ಇದೆ ಎಂದು ಹೇಳಿ, ಅದನ್ನು ಕೊಡಿಸುತ್ತೇವೆ.

ಕೆ.ಎಸ್.ಆರ್.ಟಿ.ಸಿ. ಯಿಂದ ನಂದಿ ಬೆಟ್ಟದಲ್ಲಿ ಕೊಠಡಿಗಳ ನಿರ್ಮಾಣ

191 - ಶ್ರೀ ಎನ್. ರಾಜಣ್ಣ (ಭಾರತೀನಗರ) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಂದಿಬೆಟ್ಟದಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಯಾವುದಾದರೂ ಉಪಹಾರ ಗೃಹ ಮತ್ತು ಹೋಟೆಲ್‌ನ್ನು ನಡೆಸುತ್ತಿದೆಯೇ?

ಆ) ಇದ್ದರೆ, ಅಲ್ಲಿ ಎಷ್ಟು ಕೊಠಡಿಗಳಿವೆ?

ಇ) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ನಂದಿಬೆಟ್ಟದಲ್ಲಿ ಹೊಸ ಹೋಟೆಲ್‌ನ್ನು ಕಟ್ಟುವ ಯೋಜನೆ ಅಥವಾ ಕೆಲವು ಕೊಠಡಿಗಳನ್ನು ಕಟ್ಟುವ ಯೋಜನೆ ಇದೆಯೇ?

ಈ) ಹಾಗಿದ್ದರೆ ಯೋಜನೆಯ ವಿವರಗಳೇನು?

ಉ) ಈಗಿರುವ ಉಪಹಾರ ಗೃಹವನ್ನು ಸುಧಾರಿಸುವ ಯೋಜನೆಯನ್ನು ಸರ್ಕಾರದ ಗಮನಕ್ಕೆ ತರಲಾಗಿದೆಯೆ?

ಊ) ಹಾಗಿದ್ದರೆ ಈ ಯೋಜನೆಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):

ಅ) ಹೌದು.

ಆ) ಶೌಚಾಗೃಹ ಹೊಂದಿರುವ ಎರಡು ಜೋಡಿ ಕೊಠಡಿಗಳು.

ಇ) ಈಗ ಇರುವ ಸಮ್ಮೇಳನ ಭವನವನ್ನು ನಾಲ್ಕು ಜೋಡಿ ಕೊಠಡಿಗಳನ್ನಾಗಿ ರೂ. 3 ಲಕ್ಷ 10 ಸಾವಿರ ವೆಚ್ಚದಲ್ಲಿ ಪರಿವರ್ತಿಸುವ ಯೋಜನೆ ಇದೆ.

ಈ) ಕರ್ನಾಟಕ ಭೂ ಸೇನಾ ನಿಗಮವು ಈಗಾಗಲೇ ಈ ಕಾಮಗಾರಿ ಕೆಲಸಕ್ಕೆ ರೂ. 3 ಲಕ್ಷ 10 ಸಾವಿರಗಳ ಅಂದಾಜು ಪಟ್ಟಿಯನ್ನು ತಯಾರಿಸಿದ್ದು ಇದು ಪರಿಶೀಲನೆಯಲ್ಲಿದೆ.

ಉ) ಹೌದು.

ಊ) ಈ ಉಪಹಾರಗೃಹದಲ್ಲಿ ಹೊಸ ಪೀಠೋಪಕರಣಗಳನ್ನು ಒದಗಿಸುವ ಹಾಗೂ ಪರಿಸರಕ್ಕೆ ಹೊಂದುವ ಹಾಗೆ ಅಭಿವೃದ್ಧಿ ಪಡಿಸಲು ಯೋಜಿಸಲಾಗಿದೆ.